ಉದಯವಾಣಿ

# ಹೆಣ್ಣು ಮಕ್ಕಳು ಸಂಶೋಧನೆಗೆ ಮುಂದಾಗಲಿ

## ಭಾರತೀಯ ವಿಜ್ಞಾನ ಸಂಸ್ಥೆ ಹಿರಿಯ ವಿಜ್ಞಾನಿ ಡಾ.ಎಸ್.ಎಲ್.ಭಟ್ ಅಭಿಮತ



ಕೋಲಾರದ ದೇವರಾಜ ಅರಸು ಉನ್ನತ ಶಿಕ್ಷಣ, ಸಂಶೋಧನಾ ಸಂಸ್ಥೆಯಲ್ಲಿ ಆಯೋಜಿಸಿದ್ದ 'ವಿಕಿರಣ ಭೌತಶಾಸ್ತ್ರ ಕುರಿತ ರಾಷ್ಟ್ರೀಯ ಸಮಾವೇಶವನ್ನು ಭಾರತೀಯ ವಿಜ್ಞಾನ ಸಂಸ್ಥೆ ವಿಜ್ಞಾನಿ ಡಾ.ಎಸ್.ಎಲ್.ಭಟ್ ಉದ್ಘಾಟಿಸಿದರು.

ಕೋಲಾರ ಪತ್ರಿಕೆ

ಪೋಷಕರಿಗೆ ವಿಜ್ಞಾನಿ ಡಾ|| ಎಸ್.ಎಲ್. ಭಟ್ ಕರೆ:

# ಮೂಲವಿಜ್ಞಾನ ಅಧ್ಯಯನಕ್ಕೆ ಪ್ರೋತ್ಸಾಹ ನೀಡಿ



ಕೋಲಾರ ಏ ೬

ಪೋಷಕರು ತಮ್ಮ ಮಕ್ಕಳನ್ನು ಇಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣಕ್ಕೆ ಸೀಮಿತಗೊಳಿಸದೆ ಮೂಲ ವಿಜ್ಞಾನ ಅಧ್ಯಯನಕ್ಕೆ ಪ್ರೋತ್ಸಾಹಿಸಬೇಕು ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ|| ಎಸ್.ಎಲ್.ಭಟ್ ಕರೆಯಿತ್ತರು.

ನಗರದ ಹೊರವಲಯದ ಟಮಕದ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ರಜತ ಮಹೋತ್ಸವ ಸಭಾಂಗಣದಲ್ಲಿ ಮಹಿಳಾ ಕಾಲೇಜಿನ ಭೌತಶಾಸ್ತ್ರ ವಿಭಾಗ, ರಾಷ್ಟ್ರೀಯ ವಿಜ್ಞಾನ ಅಕಾಡೆಮಿ, ಅರಸು ವೈದ್ಯಕೀಯ ವಿವಿ, ಬೆಂಗಳೂರು ಉತ್ತರ ವಿವಿಗಳ ಆಶ್ರಯದಲ್ಲಿ ನಡೆದ ವಿಕಿರಣ ಭೌತಶಾಸ್ತ್ರ ಕುರಿತ ರಾಷ್ಟ್ರೀಯ ಸಮಾವೇಶಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿಕಿರಣ ಭೌತಶಾಸ್ತ್ರದಿಂದ ವೈದ್ಯಕೀಯ ರಂಗಕ್ಕೆ ಹೆಚ್ಚಿನ ಲಾಭವಾಗಿದೆ. ಇದರ ಮತ್ತಷ್ಟು ಪ್ರಯೋಜನ ಕುರಿತು ಅಧ್ಯಯನ ಮುಂದುವರೆಯಬೇಕು ಎಂದು ಆಶಿಸಿದರು.

ಮೇರಿಕ್ಯೂರಿ ಪ್ರೇರಣೆಯೊಂದಿಗೆ ಹೆಣ್ಣು ಮಕ್ಕಳು ಸಂಶೋಧನಾ ರಂಗದಲ್ಲಿ ಹೆಚ್ಚು ಪಾಲ್ಗೊಳ್ಳಬೇಕೆಂದರು.

ಬೆಂಗಳೂರು ಉತ್ತರ ವಿವಿ ಉಪ ಕುಲಪತಿ ಕೆಂಪರಾಜು ೨೫೦ಕ್ಕೂ ಹೆಚ್ಚು ಕಾಲೇಜುಗಳ ವ್ಯಾಪ್ತಿಯ ಬೆಂಗಳೂರು ಉತ್ತರ ವಿವಿಯಲ್ಲಿ ಮೂಲ ವಿಜ್ಞಾನ ಪದವಿ ಅಧ್ಯಯನ ಮಾಡುತ್ತಿರುವವರಲ್ಲಿ ಅತಿ ಹೆಚ್ಚಿನ ಸಂಖ್ಯೆಯವರು ಕೋಲಾರ ಜಿಲ್ಲೆಯವರೆಂದು ಹೇಳಿದರು.

ದೇವರಾಜ ಅರಸು ವಿವಿ ಉಪಕುಲಪತಿ ಸಿ.ವಿ. ರಘುವೀರ್, ಬೆಂಗಳೂರು ವಿವಿ ಭೌತಶಾಸ್ತ್ರ ಪ್ರಾಧ್ಯಾಪಕ ಡಾ|| ಬಿ. ರುದ್ರಸ್ವಾಮಿ ವಿಕಿರಣಗಳಿಂದ ಇಂದು ಅನೇಕ ಉಪಯೋಗ ಕಾಣುತ್ತಿದ್ದೇವೆ, ವಿಕಿರಣ ಭೌತಶಾಸ್ತ್ರಕ್ಕೆ ಹೆಚ್ಚಿನ ಒತ್ತು ನೀಡಬೇಕಾಗಿದೆಯೆಂದು ನುಡಿದರು.

ಗೋಲ್ಡನ್ ಸಿಟಿ ಕಾಲೇಜಿನ ಕಾರ್ಯದರ್ಶಿ ವಿ.ಅಶೋಕ್ ೨೫ ವರ್ಷ ಹಿಂದೆ ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳ ಕೊರತೆ ಇತ್ತು, ಆದರೆ ಈಗ ಪರಿಸ್ಥಿತಿ ಬದಲಾಗಿದೆಯೆಂದರು.

ಕಲ್ಪಾಕಂ [illegible] ಕೇಂದ್ರದ ಹಿರಿಯ ವಿಜ್ಞಾನಿಗಳಾದ ಆರ್.ಎಸ್.ಕೇಶವರೆಡ್ಡಿ, ಡಾ|| ಬಿ.ಎಸ್.ಶೇಷಾದ್ರಿ, ವಿಕಿರಣ ಭೌತಶಾಸ್ತ್ರದ ಪ್ರಾಮುಖ್ಯತೆ ಕುರಿತು ಉಪನ್ಯಾಸ ನೀಡಿದರು.

ಮಹಿಳಾ ಕಾಲೇಜು ಪ್ರಾಂಶುಪಾಲ ಡಾ|| ಜಯರಾಮರೆಡ್ಡಿ ಅಧ್ಯಕ್ಷತೆ ವಹಿಸಿದ್ದು ೩೦೦ಕ್ಕೂ ಹೆಚ್ಚು ವಿಜ್ಞಾನಿಗಳು ಸಂಶೋಧನಾ ಪ್ರಬಂಧ ಮಂಡಿಸಿದರು.

ಮಹಿಳಾ ಕಾಲೇಜಿನ ಸೀನಾ ನಾಯರ್, ವಿಜಯಕುಮಾರ್, ಡಾ|| ದ್ಯಾವಪ್ಪ, ನಾಗರಾಜ್, ರಾಮಕೃಷ್ಣೇಗೌಡ, ಎನ್. ಸೌಮ್ಯ, ಅಶ್ವತ್ಥ್, ಮುನಿರತ್ನಪ್ಪ, ರವೀಂದ್ರ ಮತ್ತಿತರರಿದ್ದರು.